Reg. No. | | | | | | | | | |

# BCMKAL 154

## II Semester B.Com. Degree Examination, April/May 2019

*(Credit Based Semester Scheme)*

*(2017-18 Batch onwards)*

## KANNADA

## ಕನ್ನಡ ಭಾಷಾ ಪತ್ರಿಕೆ – II

Time : 3 Hours] [Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿ : **(3 × 8 = 24)**

1. ನಿನ್ನಾಸೆ ನನ್ನ ಬಿಡದಲ್ಲೆ ಎಂಬ ಹಾಡಿನಲ್ಲಿ ತಾಯಿ ಹಾಗೂ ತವರಿನ ಬಗೆಗೆ ಇರುವ ಮಮತೆ ಹೇಗೆ ಅನಾವರಣಗೊಂಡಿದೆ? ವಿವರಿಸಿರಿ.

College ... MANGALORE - 575 003

ಅಥವಾ

ತಿರು ನೀಲಕಂಠರ ಗುಪ್ತವ್ರತವನ್ನು ಶಿವನು ಬಹಿರಂಗಪಡಿಸಿದ ಬಗೆ ಹೇಗೆ? ವಿವರಿಸಿರಿ.

2. ಗೌಡರ ಗಡಿಯಾರ ಕದಿಯಲು ಜೋಗಿಯು ನಿರ್ಧರಿಸಲು ಕಾರಣವೇನು? ಪರಿಣಾಮವೇನಾಯಿತು?

ಅಥವಾ

ಪಂಡಿತ ರಮಾಬಾಯಿ ಬದುಕಿನ ಸಂಕಷ್ಟಗಳನ್ನು ಎದುರಿಸಿ ನಿಂತ ಪರಿ ಹೇಗೆ? ವಿವರಿಸಿರಿ.

3. ರಾಜಕೀಯ ಸಂಘರ್ಷದಲ್ಲಿ ಅಮಾಯಕರು ಬಲಿಯಾಗುವ ಬಗೆಯನ್ನು ಕೊಳ್ಳಿ ನಾಟಕದಲ್ಲಿ ಹೇಗೆ ಚಿತ್ರಿಸಲಾಗಿದೆ? ವಿವರಿಸಿರಿ.

ಅಥವಾ

ಉಜ್ಜಿ ಯಾರು? ಅವಳು ಯಾವ ಕಾರಣಕ್ಕಾಗಿ ದ್ರೌಪದಿಯಲ್ಲಿಗೆ ಬಂದಳು? ವಿವರಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(3 × 5 = 15)**

1. ಮಾಗಡಿ ಕೆಂಪೇಗೌಡನ ಸೊಸೆ ಬಲಿಯಾದ ಪ್ರಸಂಗವೇನು?

ಅಥವಾ

'ದಯೆಯೇ ಧರ್ಮದ ಕಣ್ಣು' ಕಥನ ಗೀತೆಯ ಆಶಯವೇನು?



P.T.O.

2. ಮೂಗಿನ ಪ್ರಾಮುಖ್ಯತೆಯನ್ನು ಪ್ರಬಂಧಕಾರರು ಗುರುತಿಸಿದ ಬಗೆ ಹೇಗೆ?

ಅಥವಾ

ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆ ಕುರಿತು ಬರೆಯಿರಿ.

3. ಉಜ್ಜಿ ಪಾತ್ರದ ಪರಿಚಯ ಮಾಡಿ ಕೊಡಿ.

ಅಥವಾ

ಕೊಳ್ಳಿ ನಾಟಕದ ಕತೆಯಲ್ಲಿ ಮಾಡಿಕೊಂಡ ಮಾರ್ಪಾಡುಗಳು ಯಾವುವು?

III. ಈ ಕೆಳಗಿನ **ಒಂದು** ಪದ್ಯದ ಹಿನ್ನೆಲೆಯೊಂದಿಗೆ ಅರ್ಥ ಸ್ವಾರಸ್ಯ ಬರೆಯಿರಿ : **(1 × 5 = 5)**

1. ಈ.........

ಕಾಲಕ್ಕೆ ಮರಳಿ ದಿಕ್ಕೆಡುತ್ತಿದ್ದಾಳೆ ಹಿಮ್ಮೆಟ್ಟಿ
ಮನೆಯೊಳಗೆ ಕೂರುವಂತಿಲ್ಲ
ಹೊರ ಬರುವಂತಿಲ್ಲ
ಯೋಚಿಸಿ ಹಣ್ಣಾಗಿ 'ರಕ್ಷೆ'ಗಾಗಿ ವ್ಯರ್ಥ ಆಲಾಪ
ಹಾಡಿ ದಣಿದಿದ್ದಾಳೆ.

2. ಧರೆಯ ನಿಕ್ಷೇಪವನು ಕದ್ದೆಲ್ಲಿಗೋಡಿದರೂ
ಧರೆಯದಲ್ಲಲ್ಲಿ ಕಳ್ಳನ ಕಾಡುವಂತೆ
ಗುರುಸಿದ್ಧ ಎನ್ನ ಮನವಾದ ವಿಷಯಂಗಳೊಳ
ಗೆರಗಲಲ್ಲಲ್ಲ ನೀಂ ಕಾಣಿಸದೆ ಬಿಡಿಸೈ

IV. ಈ ಕೆಳಗಿನವುಗಳಲ್ಲಿ **ಎರಡನ್ನು** ಕುರಿತು ಸಂದರ್ಭ ಸಹಿತ ವಿವರಿಸಿರಿ : **(2 × 4 = 8)**

1. ಪಿಡಿವನೆನೆ ಮೊದಲೆ ಮುಮ್ಮೂರ ಹಾರುತಿಹುದು.
2. ಕೆಡದಂತೆ ಬಯ್ತಿಟ್ಟು ಕುಡುವುದೀ ಪಾತ್ರೆಯಂ.
3. ಮಾತೆ ನಿನ್ನಾ ಕಾಪಕ್ (ಮಾತೆ ನಿನ್ನಾ ರಕ್ಷೆಗೆ)
4. ಚಂದಾದ ರಂಗೋಲಿ ಬಿಡಿಸಿದವಳು

V. (ಅ) ಈ ಕೆಳಗಿನವುಗಳಲ್ಲಿ **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2 × 4 = 8)**

1. ರಮಾಬಾಯಿ
2. ಬಿ.ಜಿ.ಎಲ್. ಸ್ವಾಮಿ
3. ಜಿ.ಎಸ್.ಟಿ. ಮಂಡಳಿ
4. ಬಿದಿರಿನ ಹೂ–ಕ್ಷಾಮ

(ಆ) ಕೆಳಗಿನವುಗಳಲ್ಲಿ **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2 × 4 = 8)**

1. ಭೀಮ
2. ಪ್ರಾತಿಕಾಮಿಕ
3. ವೈಶಂಪಾಯನ ಸರೋವರ
4. ಡಾ. ಜಿ.ಎಸ್. ಭಟ್ಟ

Shri Dharmasthala Manjunatheswara
College of Business Management Library
MANGALORE - 575 003

VI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ : **(12 × 1 = 12)**

1. ಕೆಂಪೇಗೌಡನಿಗೆ ಹತ್ತು ಊರುಗಳನ್ನು ಬಳುವಳಿಯಾಗಿ ಕೊಟ್ಟವರು ಯಾರು?
2. 'ತಿರುನೀಲಕಂಠದೇವರ ರಗಳೆ'ಯನ್ನು ಬರೆದವರು ಯಾರು?
3. ಕಾಸಾರ ಎಂದರೇನು?
4. ಮನಸ್ಸನ್ನು ಯಾವುದಕ್ಕೆ ಹೋಲಿಸಲಾಗಿದೆ?
5. 'ಮೂಗು' ಲಲಿತ ಪ್ರಬಂಧವನ್ನು ಯಾವ ಕೃತಿಯಿಂದ ಆರಿಸಲಾಗಿದೆ?
6. ಬಿ.ಜಿ.ಎಲ್. ಸ್ವಾಮಿಯವರ ಅಭಿನಂದನಾ ಗ್ರಂಥ ಯಾವುದು?
7. ಹೂಡುವಳಿ ತೆರಿಗೆ ಎಂದರೇನು?
8. ಡೀ.ಕೆ. ಎಂದರೇನು?
9. ಮಹಾಭಾರತ ಯುದ್ಧ ನಡೆದ ಸ್ಥಳ ಯಾವುದು?
10. ಪಟ್ಟ ಬಂಧೋತ್ಸವದ ಮೆರವಣಿಗೆ ಯಾವ ಸ್ಥಳದಿಂದ ಹೊರಡಬೇಕೆಂದು ನಿಗದಿಯಾಗಿತ್ತು?
11. ಅರಗಿನ ಮನೆಯಲ್ಲಿ ಬೆಂದು ಹೋದವರು ಯಾರು?
12. ದ್ರೌಪದಿಯ ವಾಸಕ್ಕೆ ಯಾರ ಮನೆಯನ್ನು ಕೊಡಲಾಯಿತು?